# ವಿವೇಕಾನಂದರ ಧಾರ್ಮಿಕ, ಸಾಂಸ್ಕೃತಿಕ ರಾಷ್ಟ್ರೀಯ ಮನೋಭಾವನೆ

ಪದ್ಮಿನಿ ಕೆ.ಎಲ್.

## ಭಾಗ ೧

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಮುಂಬೆಳಗಿನಲ್ಲಿ ಮೂಡಿಬಂದ ಶ್ರೇಷ್ಠ ಆಧ್ಯಾತ್ಮಿಕ ಮಹಾಪುರುಷರಾದ ಸ್ವಾಮಿ ವಿವೇಕಾನಂದರು ಪರೋಕ್ಷವಾಗಿ ಹಲವು ಮಂದಿ ನೇತಾರರನ್ನು ಹುಟ್ಟುಹಾಕಿ, ಭಾರತದ ರಾಷ್ಟ್ರೀಯ ಭಾವನೆಯನ್ನು ಎಲ್ಲೆಡೆ ವ್ಯಾಪಿಸುವಂತೆ ಮಾಡಿದರು. ಈ ಕುರಿತು ಇಲ್ಲಿ ವಿಶ್ಲೇಷಿಸಿರುವ ಲೇಖಕಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದರು, ಹಾಗೂ ಹೊಳಲ್ಕೆರೆಯ ಕಾಲೇಜೊಂದರಲ್ಲಿ ಪ್ರಾಚಾರ್ಯರಾಗಿ ನಿವೃತ್ತರಾದವರು. ಉತ್ತಮ ವಾಗ್ಮಿ, ಚಿಂತಕಿ ಹಾಗೂ ಲೇಖಕಿಯಾಗಿರುವ ಅವರು ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

**ಪ್ರವೇಶ:** ೧೮ನೇ ಶತಮಾನದ ವೇಳೆಗೆ ನಾವು ಸಂಪೂರ್ಣವಾಗಿ ಬದಲಾಗಿಬಿಟ್ಟಿದ್ದೆವು. ನಮ್ಮ ಮಾತೃಭೂಮಿ ನಮ್ಮದಾಗಿರಲಿಲ್ಲ. ನಮಗೆ ನಮ್ಮ ಧಾರ್ಮಿಕತೆಯನ್ನು ಧೈರ್ಯದಿಂದ ಅನುಸರಿಸಿಕೊಂಡು ಹೋಗುವ ಸ್ವಾತಂತ್ರ್ಯ ಇರಲಿಲ್ಲ. ನಮ್ಮದು ಎನ್ನಬಹುದಾದ ಅರ್ಥವ್ಯವಸ್ಥೆ, ವಾಸ್ತು, ಕೌಟುಂಬಿಕ ರೀತಿನೀತಿಯೇ ಮೊದಲಾದ ಎಲ್ಲವನ್ನೂ ಕಳೆದುಕೊಂಡಿದ್ದೆವು; ಒಂದು ರೀತಿಯ ಅಜ್ಞಾನದ ಕೂಪದಲ್ಲಿ ಬಿದ್ದಿದ್ದೆವು. ಬ್ರಿಟಿಷರು ನಮಗೆ ಒದಗಿಸಿದ ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಒಮ್ಮೆಲೇ ನಾವು ಜಾಗೃತರಾದೆವು. ನಮ್ಮದು ಎನ್ನುವುದು ಯಾವುದು ಎಂಬುದನ್ನು ತಳಮಟ್ಟದಿಂದ ತಿಳಿಯಲು ಪ್ರಾರಂಭಿಸಿದೆವು. ಇದಕ್ಕೆ ವಿದೇಶೀಯರ ಅಂತಹ ಪ್ರಯತ್ನವು ಒಂದು ಪ್ರೇರಣೆಯೂ ಆಗಿತ್ತು. ಈ ಶೋಧವನ್ನು ಒಂದು ರೀತಿಯಲ್ಲಿ ಅದರ ತಾರ್ಕಿಕ ಅಂತ್ಯಕ್ಕೆ ಒಯ್ದವರು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಗರಡಿಯಲ್ಲಿ ತಯಾರಾದ ಅವರ ಶಿಷ್ಯೋತ್ತಮ ಸ್ವಾಮಿ ವಿವೇಕಾನಂದರು.

ವಿವೇಕಾನಂದರ ಧಾರ್ಮಿಕ, ಸಾಂಸ್ಕೃತಿಕ ನಿಲುವನ್ನು ಮತ್ತು ರಾಷ್ಟ್ರೀಯ ಮನೋಭಾವನೆಯನ್ನು ಕುರಿತು ಚಿಂತಿಸುವಾಗ ಮೂರು ಚಿತ್ರಗಳು ಗಮನಕ್ಕೆ ಬರುತ್ತವೆ. ಅವರು ಇನ್ನೂ ಬಾಲಕರಿದ್ದಾಗಿನ ಚಿತ್ರ ಅದು. ಆಗ ಮನೆಯ ಮುಂದೆ ಬಂದು ನಿಂತು ಬೇಡುವವರು ಇದ್ದರು. ಅವರಿಗೆ ಏನನ್ನಾದರೂ ಕೊಡಬೇಕು ಎನ್ನುವ ಆಸೆ ಅವರ ಅಮ್ಮನಿಗಿದ್ದರೂ ತಮ್ಮ ಕೌಟುಂಬಿಕ ಪರಿಸ್ಥಿತಿಯನ್ನು ಅವರು ಗಮನಿಸಲೇಬೇಕಿತ್ತು. ತಾವು ಆ ಭಿಕ್ಷುಕರ ಗುಂಪಿನ ಇನ್ನೊಬ್ಬ ಸದಸ್ಯರು ಆಗಬಾರದು ಎನ್ನುವ ಅರಿವು ಅವರಿಗಿತ್ತು. ಅವರ ಔದಾರ್ಯಕ್ಕೆ ಅದೇ ಅಣೆಕಟ್ಟು ಆಗಿತ್ತು. ಆದರೆ ಬಾಲಕ ನರೇಂದ್ರನಿಗೆ ಅದು ಅರ್ಥವಾಗುತ್ತಿತ್ತೋ ಇಲ್ಲವೋ ತಿಳಿಯದು. ಆದರೆ ಕೈಗೆ ಏನು ಸಿಕ್ಕಿದರೂ ಅದನ್ನು ಬೇಡುವವರಿಗೆ ಕೊಡಲು ಬಾಲಕನಿಗೆ ಯಾವ ಅಡೆತಡೆಯೂ ಇರಲಿಲ್ಲ. ಒಮ್ಮೆ ಆತ ಅಮ್ಮನ ಬೆಲೆಬಾಳುವ ಸೀರೆಯನ್ನೇ ಕಿಟಕಿಯಿಂದಲೇ ಕೊಟ್ಟುಬಿಟ್ಟಿದ್ದನಂತೆ. ಇನ್ನೊಂದು ಚಿತ್ರ, ಆತ ತಾನು ಶಿವ ಎಂದು



ಮೈಗೆಲ್ಲಾ ಬೂದಿ ಬಳಿದುಕೊಂಡು ಕುಣಿಯುತ್ತಿದ್ದದ್ದು. ಮೂರನೆಯ ಚಿತ್ರ, ಇಚ್ಛೆ ಬಂದಾಗಲೆಲ್ಲ ಧ್ಯಾನ ಮಾಡುತ್ತಾ ಕುಳಿತುಕೊಳ್ಳುತ್ತಿದ್ದ ಬಾಲಕನ ಮೈಮೇಲೆ ಹಾವು ಹರಿದು ಹೋದರೂ ಹೆದರದೆ ಸ್ಥಿತಪ್ರಜ್ಞನಾಗಿ ಕುಳಿತುಕೊಂಡದ್ದು. ಭಾರತೀಯ ಎಂದು ನಾವು ಏನನ್ನು ಪರಿಕಲ್ಪಿಸುತ್ತೇವೆಯೋ ಅದರಲ್ಲಿ ಪರಮ ಆತ್ಯಂತಿಕ ದೈವವನ್ನು ಭಕ್ತಿಯಿಂದ ಭಾವಿಸುವುದು, ಇನ್ನೊಬ್ಬರ ಕಷ್ಟಗಳಿಗೆ ಯಾವುದೇ ನೆವ ಹೇಳದೆ ಸ್ಪಂದಿಸುವುದು, ತಮ್ಮ ಆಪತ್ತುಗಳ ಸಂದರ್ಭದಲ್ಲಿಯೂ ವಿಚಲಿತವಾಗದೇ ಇರುವುದು, ಅಂತರಂಗ ಶೋಧನೆಯನ್ನು ಸಾಧ್ಯವಾಗಿಸುವ ಧ್ಯಾನಮಗ್ನತೆ ಈ ನಾಲ್ಕು ಸಂಗತಿಗಳು ಅವಿಭಾಜ್ಯ ಸಂಗತಿಗಳು. ಇವು ನಮ್ಮ ರಾಷ್ಟ್ರೀಯತೆಯನ್ನು ಅಭಿವ್ಯಕ್ತ ಪಡಿಸುವ ಒಂದು ಗಮನಾರ್ಹ ಮುಖ.

ವಿವೇಕಾನಂದರನ್ನು ಪರಿಕಲ್ಪಿಸುವಾಗ ಕಣ್ಣಮುಂದೆ ಬರುವ ಇನ್ನೊಂದು ಚಿತ್ರ, ಬ್ರಿಟಿಷ್ ಆಡಳಿತ ವ್ಯವಸ್ಥೆಯಲ್ಲಿ ತಲೆಯೆತ್ತಿದ್ದ

ಪಾಶ್ಚಾತ್ಯ ಮಾದರಿಯ ಶಿಕ್ಷಣ ಸಂಸ್ಥೆಯಲ್ಲಿ ಕಾಲೇಜು ಮಟ್ಟದ ವಿದ್ಯಾಭ್ಯಾಸ ಪಡೆದ ಯುವಕ ನರೇಂದ್ರ, ಬ್ರಹ್ಮಸಮಾಜದಿಂದ ಆಕರ್ಷಿತನಾದದ್ದು. ಆಗ ಭಾರತೀಯ ಎಂದೆನ್ನಿಸಿಕೊಂಡದ್ದೆಲ್ಲ ಒಂದು ರೀತಿಯ ಆಕ್ರಮಣಕಾರೀ ಅಪಹಾಸ್ಯಕ್ಕೆ, ದಾಳಿಗೆ ಒಳಗಾಗುತ್ತಿತ್ತು. ಅದು ಅನೇಕರಿಗೆ ಸರಿಯಾದದ್ದು ಎಂದೆನ್ನಿಸುತ್ತಿತ್ತು. ಅಂತಹವರಲ್ಲಿ ಪಾಶ್ಚಾತ್ಯ ರೀತಿಯ ವಿದ್ಯಾಭ್ಯಾಸ ಪಡೆದವರು ವಿಶೇಷವಾಗಿ ಎದ್ದುಕಾಣುತ್ತಿದ್ದರು. ಅವರು ತಮ್ಮ ಗ್ರಹಿಕೆಯನ್ನು ಆಕರ್ಷಕ ತರ್ಕದಿಂದ ಪ್ರತಿಪಾದಿಸುತ್ತಿದ್ದರು. ಎಷ್ಟೋ ಮಂದಿ ಸ್ವ-ಇಚ್ಛೆಯಿಂದ ಕ್ರೈಸ್ತರಾಗಿ ಮತಾಂತರಗೊಂಡಿದ್ದರು. ಹೀಗಿದ್ದಾಗಲೂ ಯುವಕ ನರೇಂದ್ರ ಹಿಂದೂ ಆಗಿಯೇ ಉಳಿದದ್ದು ಅವರ ಗಟ್ಟಿಯಾದ ರಾಷ್ಟ್ರೀಯತೆಯ ದ್ಯೋತಕವೇ. ಆನಂತರ ಪರಮ ಅನುಭಾವಿ ಶ್ರೀರಾಮಕೃಷ್ಣರ ಪ್ರಭಾವಲಯಕ್ಕೆ ಬಂದದ್ದು, ನಮ್ಮ ಆಧ್ಯಾತ್ಮಿಕ ಪರಂಪರೆಯ ಹಿರಿಮೆಯನ್ನು ವ್ಯಾಪಕವಾದ ಮತ್ತು ವಿಮರ್ಶಾತ್ಮಕವಾದ ಅಧ್ಯಯನದಿಂದ ಮನಗಂಡದ್ದು, ಪರಮ ಸದ್ಗುರು ಶ್ರೀರಾಮಕೃಷ್ಣರ ಅಪೇಕ್ಷೆಯೂ ತಮ್ಮ ವ್ಯಕ್ತಿತ್ವದ ಅನನ್ಯತೆಯೂ ಆಗಿದ್ದ ಸರ್ವರ ಅಭ್ಯುದಯಕ್ಕಾಗಿ ಭಾರತೀಯ ಆಧ್ಯಾತ್ಮಿಕ ನೆಲೆಯಲ್ಲಿಯೇ ಬಹುಮುಖವಾಗಿ ಶ್ರಮಿಸಿದುದು ಸುವರ್ಣಾಕ್ಷರಗಳ ಇತಿಹಾಸ.

ಶ್ರೀರಾಮಚಂದ್ರನನ್ನು ವರ್ಣಿಸುವಾಗ ವಾಲ್ಮೀಕಿ **ವಿಗ್ರಹವಾನ್ ಧರ್ಮಃ, ವೇದವೇದ್ಯೇ ಪರೇ ಪುಂಸೇ ಜಾತೇ ದಶರಥಾತ್ಮಜೇ** ಎನ್ನುತ್ತಾರೆ. ಇದು ವಿವೇಕಾನಂದರ ವ್ಯಕ್ತಿಚಿತ್ರವೂ ಹೌದು. ಧರ್ಮ ಎನ್ನುವುದು ಎಲ್ಲರಲ್ಲೂ ಎಲ್ಲೆಲ್ಲೂ ವಾಸ್ತವವಾಗಿ ಇರುವ ಒಂದು ಗುಣ; ಶ್ರುತಿ ಸ್ಮೃತಿ ಆಧಾರಿತ ದಯೆ, ಕ್ಷಮೆ, ಕ್ರೋಧರಹಿತತೆ, ಸಾಮರಸ್ಯತೆಯೇ ಮೊದಲಾದ ಆಚಾರಗಳಿಂದ ಹೆಚ್ಚು ಹೆಚ್ಚು ಪ್ರಕಾಶಕ್ಕೆ ಬರುವಂತಹುದು ಎನ್ನುವುದು ಒಂದು ಭಾರತೀಯ ತಾತ್ತ್ವಿಕ ಸಿದ್ಧಾಂತ. ಈ ನೆಲೆಯಲ್ಲಿ ಅವರು ಹಿಂದೂ ಧರ್ಮವನ್ನು ಆಧ್ಯಾತ್ಮಿಕವಾಗಿ ಸಾಂಸ್ಕೃತಿಕವಾಗಿ ಹೇಗೆ ಗ್ರಹಿಸಿದರು ಎನ್ನುವ ಹಿನ್ನೆಲೆಯಲ್ಲಿ ಅವರ ದೇಶಭಕ್ತಿಯನ್ನು ಅರ್ಥೈಸಬೇಕಾಗುತ್ತದೆ. ಅದನ್ನು ವಿವೇಕಾನಂದರು ಗ್ರಹಿಸುವುದು ಹೀಗೆ: ೧) ಹಿಂದೂ ಧರ್ಮದ ಮೂಲಭೂತ ನಂಬಿಕೆ ಆಚಾರಗಳಿಗೆಲ್ಲ ವೇದಗಳೇ ಮಾರ್ಗದರ್ಶಿ ಸೂತ್ರಗಳು, ಏಕೆಂದರೆ ವೇದಗಳು ಅಪೌರುಷೇಯ. ೨) ಮನುಷ್ಯನ ಬದುಕಿಗೆ ದೈಹಿಕ, ಭೌತಿಕ ಆಯಾಮಗಳಿರುವುದರ ಜೊತೆಗೆ ಆಧ್ಯಾತ್ಮಿಕ ಆಯಾಮವೂ ಇದೆ. ಇವು ಪರಸ್ಪರ ಒಳಗೊಳ್ಳುವವುಗಳೇ ವಿನಃ ವಿರೋಧಿಗಳಲ್ಲ. ೩) ಪರಮ ವಾಸ್ತವತೆಯಾಗಿರುವ ದೇವರು ಅತೀತನಾದವನು. ಅವನನ್ನು ಯಾವ ಹೆಸರಿನಿಂದಲೂ ಕರೆಯಬಹುದು, ಅವನನ್ನು ಯಾವ ರೂಪದಲ್ಲಾದರೂ ಭಾವಿಸಬಹುದು, ಯಾವ ರೀತಿಯಲ್ಲಾದರೂ ಪೂಜಿಸಬಹುದು, ಇದು ಅವರವರ ಭಾವಕ್ಕೆ ಸಂಬಂಧಿಸಿದುದು. ಇದನ್ನು ವ್ಯಕ್ತಪಡಿಸುವ ರೀತಿ **ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ। ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ** — ಎಂಬುದು. ೪) ಪ್ರೀತಿ ಔದಾರ್ಯಗಳೇ ನಿಜ-ಧಾರ್ಮಿಕತೆಯ ಹೆಗ್ಗುರುತು. ಬದುಕುವ ರೀತಿ ವೈಯಕ್ತಿಕ, ಆದ್ದರಿಂದ ಯಾರೂ ನಿಕೃಷ್ಟರಲ್ಲ, ಯಾರೂ ದ್ವೇಷಿಸಬೇಕಾದವರು ಅಲ್ಲ, ಬದಲಿಗೆ ಎಲ್ಲವೂ ಮತ್ತು ಎಲ್ಲರೂ ಪ್ರೀತ್ಯರ್ಹರು. ಎಲ್ಲರಲ್ಲೂ ಪ್ರೀತಿಭಾವ ಸಹಜವಾಗಿದೆ, ಅದರಿಂದಲೇ ಎಲ್ಲರೂ ಪ್ರೀತಿಸುವುದರ ಮೂಲಕ ಸಂತೋಷದಿಂದ ಇರುತ್ತಾರೆ. ದೇವರನ್ನು ಆರಾಧಿಸುವುದು ಎಂದರೆ ದೇವರನ್ನು ಪರಮ ಆತ್ಮೀಯನಂತೆ ಪ್ರೀತಿಸುವುದು ಎಂದೇ ಅರ್ಥ. ವಾಸ್ತವವಾಗಿ ನಾವೆಲ್ಲರೂ **ಅಮೃತಸ್ಯ ಪುತ್ರಾಃ.** ನಮ್ಮೆಲ್ಲರ ಬದುಕಿನ ತುತ್ತ ತುದಿ ಯಾವ ಅರೆಕೊರೆಯೂ ಇಲ್ಲದ ಆನಂದಾನುಭವ. ಇದು ಎಲ್ಲರಿಗೂ ಸಾಧ್ಯ. ಯಾರೂ ಪಾಪಿಗಳಲ್ಲ, ಈ ಜಗತ್ತು ದೇವರ ಆವಾಸಸ್ಥಾನ. ನಮ್ಮೆಲ್ಲರಲ್ಲೂ ದೇವರು ಅಂತರ್ಯಾಮಿಯಾಗಿ ಇದ್ದಾನೆ. ಎಲ್ಲವೂ ಪವಿತ್ರವಾದದ್ದು, ಎಲ್ಲರೂ ಪವಿತ್ರರು. ೫) ಯಾವ ಯಾವುದೋ ಕಾರಣಕ್ಕಾಗಿ ನಾವು ಸಣ್ಣತನದಿಂದ ನಡೆದುಕೊಳ್ಳುತ್ತೇವೆ. ಸಣ್ಣತನಗಳು ಎಲ್ಲಿಯವರೆಗೆ ಇರುತ್ತವೆಯೋ ಅಲ್ಲಿಯವರೆಗೆ ನಮಗೆ ದುಃಖ, ನೋವು, ಸಂಕಟಗಳು ತಪ್ಪಿದ್ದಲ್ಲ. ಎಲ್ಲವನ್ನೂ ದೈವೇಚ್ಛೆ ಎಂದು ತಿಳಿದು ಎಲ್ಲ ಕೆಲಸಗಳನ್ನು ಅತ್ಯಾವಶ್ಯಕ ಕರ್ತವ್ಯ ಎಂದು ಮಾಡುತ್ತಿದ್ದರೆ ನಾವು ಪರಿಶುದ್ಧರು ಆಗುತ್ತೇವೆ, ಸಣ್ಣತನಗಳಿಂದ ಪಾರಾಗುತ್ತೇವೆ. ೬) ದೇವರು ಕರುಣಾಳು, ನಾವು ಅಹಂಕಾರದಿಂದ ದೈವೀಕೃಪೆಯನ್ನು ಕಳೆದುಕೊಳ್ಳಬಾರದು, ಅಷ್ಟೇ. ನಮ್ಮ ವೈಯಕ್ತಿಕತೆಯನ್ನು ಮುಂದುಮಾಡುವ ಬದುಕೇ ನಮ್ಮ ಎಲ್ಲಾ ಸಂತಾಪಗಳ ಮೂಲ, ಅದು ಇಲ್ಲವಾಯಿತು ಎನ್ನುವುದರ ಅರ್ಥ ನದಿಯ ನೀರು ಸಾಗರವನ್ನು ಸೇರುವವರೆಗೂ ನದಿಯ ನೀರು ಎನ್ನುವ ಪ್ರತ್ಯೇಕತೆ ಇರುತ್ತದೆ, ಸಾಗರವನ್ನು ಸೇರಿದಮೇಲೆ ಪ್ರತ್ಯೇಕತೆಗೆ ಜಾಗವೇ ಇರುವುದಿಲ್ಲ ಎನ್ನುವ ಹಾಗೆ ಪರಮ ಸತ್ಯವಾದ ಏಕದೇವರಲ್ಲಿ ನಾವು ವೈಯಕ್ತಿಕತೆಯ ಪ್ರತ್ಯೇಕತೆಯಿಲ್ಲದೆ ಸೇರಿಹೋದೆವು ಎಂದೇ. ೭) ಇತರೆ ಧರ್ಮಗಳು ಎಲ್ಲರಿಗೂ ಒಂದೇ ಕೋಟನ್ನು ತೊಡಿಸಬಯಸುತ್ತವೆ, ಅದು ಯಾರಿಗಾದರೂ ಹೊಂದಿಕೆಯಾಗದಿದ್ದರೆ ಅವರು ಕೋಟು ಇಲ್ಲದೇ ಇರಬೇಕಾಗುತ್ತದೆ; ಆದರೆ ಹಿಂದೂ ಚಿಂತನೆಯಲ್ಲಿ ಯಾರಿಗೆ ಯಾವುದು ಹಿಡಿಯುತ್ತದೆಯೋ ಅದನ್ನೇ ತೊಟ್ಟುಕೊಳ್ಳಲು ಸ್ವಾತಂತ್ರ್ಯವಿದೆ; ಬದುಕು ರೂಪುಗೊಳ್ಳುತ್ತಾ ಹೋಗುವಂತಹುದು. ದೇವರ ವಿಗ್ರಹ ನಮ್ಮ ಮುಂದಿದ್ದರೂ ನಾವು ದೇವರು ಎಂದರೆ ಆ ವಿಗ್ರಹ ಮಾತ್ರ ಎಂದು ಭಾವಿಸುವುದಿಲ್ಲ, ಆ ವಿಗ್ರಹದಲ್ಲಿ ನಾವು ಕಲ್ಪಿಸಿಕೊಳ್ಳುತ್ತಿರುವುದು ಪರಿಪೂರ್ಣ ಜ್ಞಾನ ಶಕ್ತಿ ಆನಂದದ ಪ್ರತೀಕವನ್ನು ಮಾತ್ರ. ಹಾಗೆಯೇ ಕೋಟು ಎನ್ನುವ ಚೌಕಟ್ಟು, ಚೌಕಟ್ಟಿಗೆ ಅಂಟಿಕೊಳ್ಳಬಾರದು, ಚೌಕಟ್ಟಿನಲ್ಲಿ ಇದ್ದೂ ಚೌಕಟ್ಟುಗಳನ್ನು ಮೀರಬೇಕು. ಇಂಥ ಸಂಪೂರ್ಣ ಸಮಾನತೆಯನ್ನು ಎತ್ತಿಹಿಡಿಯುವ, ಇಡೀ ಬದುಕನ್ನು ದೈವೀಮಯವಾಗಿಸುವ ಅಗಾಧ ಸಾಧ್ಯತೆಯನ್ನು ನಮ್ಮದನ್ನಾಗಿಸುವ ಭರವಸೆ

ಯನ್ನು ಕೊಡುವ ಆಧ್ಯಾತ್ಮಿಕ ಪ್ರಾಯೋಗಿಕ ಧರ್ಮ ನಮ್ಮದು ಎನ್ನುವ ಹೆಮ್ಮೆ ವಿವೇಕಾನಂದರದಾಗಿತ್ತು.

ನಾನು ದೈವವಾಗುತ್ತೇನೆ ಎಂದಾದಾಗ ನನ್ನ ಆತ್ಮವು ಪರ ಮಾತ್ಮನ ಆಲಯವಾಗುತ್ತದೆ; ನನ್ನ ಪ್ರತಿಯೊಂದು ಕ್ರಿಯೆಯೂ ಯಾವುದೇ ಅಪೇಕ್ಷೆ ನಿರೀಕ್ಷೆ ಇಲ್ಲದ ಪ್ರೀತಿಯುತವಾದ, ಕರ್ತವ್ಯ ಪರವಾದ ಕ್ರಿಯೆಯೇ ಆಗಿರುತ್ತದೆ. ಹೀಗೆ, 'ನನ್ನ ಧರ್ಮ ನನ್ನ ತನವನ್ನು, ಬದುಕಿನ ಅರ್ಥವನ್ನು ಗರಿಷ್ಠ ಮಟ್ಟಕ್ಕೆ ವಿಸ್ತರಿಸುವ, ದೈವೀಮಯವಾಗಿಸುವ ಧರ್ಮ; ಪ್ರತಿಯೊಬ್ಬರೂ ದೈವಿಕತೆ ಯನ್ನು ತಮ್ಮದನ್ನಾಗಿಸಿಕೊಳ್ಳಬೇಕು ಎಂಬುದು ನನ್ನ ಆಶಯ' ಎನ್ನುತ್ತಾರೆ ವಿವೇಕಾನಂದರು.

## ವಿವೇಕಾನಂದರ ಮಾನವಿಕ ಆಧ್ಯಾತ್ಮಿಕತೆಯ ಪರಿಕಲ್ಪನೆ

ವಿವೇಕಾನಂದರದು ಮಾನವೀಯತಾವಾದ ಮತ್ತು ಚೈತನ್ಯ ವಾದಗಳೆರಡನ್ನೂ ತಮ್ಮ ಸಮಕಾಲೀನ ಭಾರತೀಯರನ್ನು ಜಾಗೃತ ಗೊಳಿಸುವ ತಮ್ಮ ಉದ್ದೇಶಕ್ಕೆ ಹೊಂದಿಕೊಳ್ಳುವಂತೆ ಸಮನ್ವಯ ಗೊಳಿಸಿದ ಆಧ್ಯಾತ್ಮಿಕತೆ. ಮೂಲಭೂತವಾಗಿ ಆಧ್ಯಾತ್ಮಿಕತೆಯು ಪವಿತ್ರ ಎಂದೆನ್ನಿಸಿಕೊಳ್ಳುವ ಕಾಲಾತೀತ ಧಾರ್ಮಿಕ ಕಾಳಜಿಗಳಿಗೆ ಸಂಬಂಧಿಸಿದುದು. ಅದು ಪ್ರಪಂಚದ ಆತ್ಯಂತಿಕ ಸತ್ಯತೆಯನ್ನು ನಿರಾಕರಿಸುತ್ತದೆ, ಮಾನವನ ಮಿತಿಗಳನ್ನು ಮೀರುವ ಪರಿಕಲ್ಪನೆ ಗಳನ್ನು ಮತ್ತು ಅತ್ಯಂತ ಹಿರಿದಾದ ವಾಸ್ತವಿಕತೆಗೆ ಸ್ವ ಇಚ್ಛೆಯಿಂದ ಶರಣಾಗುವುದನ್ನು ಒಳಗೊಳ್ಳುತ್ತದೆ. ಮಾನವೀಯತಾವಾದವು ಮನುಷ್ಯನ ಸ್ವಪ್ರಯತ್ನ, ವೈಯಕ್ತಿಕ ವ್ಯಕ್ತಿತ್ವದ ಪ್ರತಿಪಾದನೆ, ಮನುಷ್ಯಮಾತ್ರರೆಲ್ಲರ ಘನತೆಯನ್ನು ಎತ್ತಿಹಿಡಿಯುವ ಪ್ರಜಾ ಸತ್ತಾತ್ಮಕತೆ, ಆರ್ಥಿಕ ಸಮಾನತೆ, ಸಾಮಾಜಿಕ ನ್ಯಾಯವೇ ಮೊದ ಲಾದ ಪ್ರಾಪಂಚಿಕ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುತ್ತದೆ. ಇವೆ ರಡೂ ಆಶಯಗಳನ್ನು ಹೊಂದಿಸುವ ಚಿಂತನೆಯ ಆರಂಭ ಬಿಂದು ಪಾಶ್ಚಾತ್ಯರಲ್ಲಿ ಜ್ಯೂಯಿಷ್ ಶ್ರುತಿಗಳಾದರೆ ಭಾರತದಲ್ಲಿ ವೇದ ಗಳು. ಜ್ಯೂಯಿಷ್ ಶ್ರುತಿಗಳು ದೇವರನ್ನು ಅಸಾಧಾರಣ ತಂದೆ ತಾಯಂದಿರಂತೆ ಮಾನವೀಯವಾಗಿಯೇ ಪರಿಕಲ್ಪಿಸಿದ್ದವು; ಮಾನವಿಕ ನೈತಿಕತೆ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿ ದ್ದವು. ಅದೇ ಸಮಯದಲ್ಲಿ ಭಾರತೀಯ ಋಷಿಗಳು ಎಲ್ಲಾ ವ್ಯಕ್ತಿಗಳಲ್ಲಿ ಸಮಾನವಾಗಿ ಕ್ರಿಯಾಶೀಲವಾಗಿರುವ ತತ್ತ್ವವೊಂದನ್ನು ಆಂತರಂಗಿಕ ಒಳನೋಟದಿಂದ ಕಂಡುಕೊಂಡಿದ್ದರು. ಆ ತತ್ತ್ವದ ಸ್ವರೂಪವನ್ನು ಮೂರ್ತ ಪ್ರಾಪಂಚಿಕ ಜೈವಿಕ ಅಜೈವಿಕ ಸಂಗತಿಗಳ ಸೂಕ್ಷ್ಮ ಪರಿಶೀಲನೆಯಿಂದ **ಸತ್ಯಂ ಸುಂದರಂ ಶಿವಂ** ಎಂದು ಅರ್ಥ ಮಾಡಿಕೊಂಡಿದ್ದರು. ಮನುಷ್ಯನಲ್ಲಿ ಹಾಸುಹೊಕ್ಕಾಗಿರುವ ಮೂಲ ಭೂತ ಚೈತನ್ಯದ ಅಸ್ತಿತ್ವವನ್ನು, ಅದರ ಪಾವಿತ್ರ್ಯವನ್ನು, ಅದರ ಅರಿವನ್ನು ಯೌಗಿಕ ವಿಧಾನದಿಂದ ಪಡೆಯುವ ಸಾಧ್ಯತೆಯನ್ನು ಎತ್ತಿಹಿಡಿದಿದ್ದರು. ಒಂದು ಚಿಂತನೆ ಪ್ರಾಪಂಚಿಕತೆಯ ಹಿರಿಮೆ ಯನ್ನು ಪ್ರಸ್ತಾಪಿಸಿದರೆ ಇನ್ನೊಂದು ಪ್ರಾಪಂಚಿಕ ನೆಲೆಯಲ್ಲಿ ಯೇ ಪ್ರಪಂಚಾತೀತತೆಯ ಘನತೆಯನ್ನು ಪ್ರಸ್ತಾಪಿಸುತ್ತದೆ.

ಕಾಲಾನುಕ್ರಮದಲ್ಲಿ ಇದೇ ಪ್ರಾಪಂಚಿಕ ನೆಲೆಗಟ್ಟಿನ ತಾತ್ತ್ವಿಕತೆಯು ಚೈತನ್ಯರೂಪೀ ಪ್ರಪ್ರಥಮ ತಂದೆಯ ಪ್ರಪಂಚಾತೀತ ಆತ್ಯಂತಿಕ ಸತ್ಯತೆಯನ್ನು, ಪ್ರಾಪಂಚಿಕ ಪ್ರಪ್ರಥಮ ತಾಯಿಯ ಆತ್ಯಂತಿಕ ಸತ್ಯತೆಯನ್ನು ಪ್ರತಿಪಾದಿಸುವ ಕ್ರಿಶ್ಚಿಯಾನಿಟಿಯ ರೂಪವನ್ನು ಪಡೆಯಿತು. ಅದೇ ಸಮಯದಲ್ಲಿ ಭಾರತದಲ್ಲಿ ಪ್ರಾಪಂಚಿಕ ಮನುಷ್ಯನ ಬಗೆಗಿನ ಕಾಳಜಿಯಾಗಿ ಕಾಣಿಸಿಕೊಂಡ ಬೌದ್ಧಧರ್ಮವು ವಿಜ್ಞಾನ ಕಲೆ ರಾಜಕೀಯ ತತ್ತ್ವಶಾಸ್ತ್ರಗಳೆಲ್ಲ ವನ್ನೂ, ಪ್ರಪಂಚವನ್ನು ಮೀರುವ ಸಾಂಪ್ರದಾಯಿಕ ಮೌಲ್ಯ ಗಳೆಲ್ಲವನ್ನೂ ಕೇಂದ್ರವಾಗುಳ್ಳ ಪ್ರಾಪಂಚಿಕ ಧಾರ್ಮಿಕ ವ್ಯವಸ್ಥೆ ಯಾಗಿ ಹರಡಿಕೊಂಡಿತು. ಅನಂತರ ಇವೆರಡೂ ಮಾನವೀಯ ಸ್ಪರ್ಶವಿಲ್ಲದ ಜಿಗುಟಾದ, ಒರಟಾದ ವಿಧಿ ವಿಧಾನ ಪ್ರಧಾನವಾದ ಧಾರ್ಮಿಕತೆಯಾಗಿಬಿಟ್ಟಾಗ ಪಶ್ಚಿಮದಲ್ಲಿ ಮಹಮ್ಮದ್ ಪೈಗಂ ಬರ್‌ರವರ ಇಸ್ಲಾಂ ಮತ್ತು ಕ್ರಿಶ್ಚಿಯಾನಿಟಿ ನಡುವೆ ಕಾಣಿಸಿಕೊಂಡ ಸಂಘರ್ಷ ಪ್ರಾಣಾಂತಿಕ ಇನ್‌ಕ್ವಿಷನ್‌ಗೆ ಅವಕಾಶ ಕೊಟ್ಟಿತು. ಭಾರತದಲ್ಲಿ ಬುದ್ಧ ಮತ್ತು ಶಂಕರಾಚಾರ್ಯರ ಅನುಯಾಯಿ ಗಳ ನಡುವಿನ ತಿಕ್ಕಾಟ ಸತ್ಯವನ್ನು ತೀರಾ ವೈಯಕ್ತಿಕವಾಗಿಸುವ ಭಕ್ತಿ ಪ್ರಧಾನ ತಾತ್ತ್ವಿಕತೆಗಳು ತಲೆಯೆತ್ತಲು ಅವಕಾಶವನ್ನು ಒದಗಿ ಸಿತು. ಇನ್‌ಕ್ವಿಷನ್ ಭೌತವಿಜ್ಞಾನಗಳ ಬೆಳವಣಿಗೆಗೆ ಭದ್ರ ಬುನಾದಿ ಯನ್ನು ಹಾಕಿ ಮನುಷ್ಯನಿಗಿಂತ ಪ್ರಕೃತಿಯೇ ಹೆಚ್ಚು ಗಮನಾರ್ಹ ಎಂದರೆ ಭಾರತದಲ್ಲಿ ವಿವಿಧ ತಾತ್ತ್ವಿಕ ಸಿದ್ಧಾಂತಗಳು ಆತ್ಮಸಾಕ್ಷಾ ತ್ಕಾರ, ದೈವಸಾಕ್ಷಾತ್ಕಾರಕ್ಕೆ ಕಾರಕವಾಗುತ್ತದೆ ಎನ್ನುವ ಜನ ಸಾಮಾನ್ಯರನ್ನೂ ಸ್ತ್ರೀಯರನ್ನೂ ಒಳಗೊಳ್ಳುವ ವಿವಿಧ ಸಾಧನ- ತಂತ್ರಗಳನ್ನು ಹೆಣೆದವು. ವ್ಯಕ್ತಿ ಇಂಥ ಬಗೆ ಬಗೆಯ ಜಾಲಗಳಲ್ಲಿ ಸಿಕ್ಕಿಕೊಂಡಿದ್ದ ಕಾಲಘಟ್ಟ ಶ್ರೀರಾಮಕೃಷ್ಣರದು ಮತ್ತು ಅವರ ಪ್ರಮುಖ ಶಿಷ್ಯ ವಿವೇಕಾನಂದರದು.

ಇದರ ಜೊತೆಗೆ ವಿಜ್ಞಾನಗಳ ಗ್ರಹಿಕೆಯ ವೇಗ ಮತ್ತು ಯಶಸ್ಸಿ ನಿಂದಾಗಿ ಭಾರತವನ್ನೂ ಒಳಗೊಂಡಂತೆ ಅನೇಕ ದೇಶಗಳನ್ನು ಬ್ರಿಟಿಷರು, ಫ್ರೆಂಚರು, ಡಚ್ಚರೇ ಮೊದಲಾದವರು ತಮ್ಮ ವಸಾ ಹತುಗಳನ್ನಾಗಿಸಿಕೊಂಡಿದ್ದರು, ಅವುಗಳನ್ನೂ ಅಲ್ಲಿಯ ಜನರನ್ನೂ ಮನಬಂದಂತೆ ದುರ್ಬಳಕೆ ಮಾಡಿಕೊಂಡರು, ಸತ್ವಹೀನ ಆಗಿಸಿ ದರು. ಇದಕ್ಕೆ ಪ್ರತಿಕ್ರಿಯೆಯಾಗಿ ಭೌತ ಪ್ರಕೃತಿ ವಿಜ್ಞಾನಗಳು, ಮಾನವಿಕ ವಿಜ್ಞಾನಗಳು ಮನಗಾಣಿಸುವ ಸಾಮಾಜಿಕ ನ್ಯಾಯ ಪ್ರತಿಪಾದನೆಯಾಧಾರಿತ ತಿಳುವಳಿಕೆಯನ್ನು ಸರ್ವ-ಅತೀತ ವಾಸ್ತವಿಕತೆಯ ಗ್ರಹಿಕೆಯನ್ನು ಸಮನ್ವಯಗೊಳಿಸುವ ಬ್ರಹ್ಮ ಸಮಾಜ, ಆರ್ಯಸಮಾಜಗಳಂತಹ ಸಾಂಸ್ಥಿಕ ಪ್ರಯತ್ನಗಳೂ ಕಾಣಿಸಿಕೊಂಡವು. ಇಂಥ ಹಿನ್ನೆಲೆಯಲ್ಲಿ ಸರ್ವಧರ್ಮ ಮತ್ತು ಸರ್ವಧರ್ಮೀಯರ ಏಕತೆ ಸಾಮರಸ್ಯತೆಯನ್ನು ಅನುಭವ ಅನುಭಾವಗಳ ನೆಲೆಯಲ್ಲಿ ಎತ್ತಿಹಿಡಿದ ಶ್ರೀರಾಮಕೃಷ್ಣರ ಸಮ ನ್ವಯ ದರ್ಶನ ಮತ್ತು ಮಾನವ ಅಸ್ತಿತ್ವದ ಘನತೆಯನ್ನು ಪ್ರಾಪಂ ಚಿಕತೆಯ ಭಾಷೆಗೆ ಭಾಷಾಂತರಿಸುವ ವಿಜ್ಞಾನ-ತಂತ್ರಜ್ಞಾನ

ಇವೆರಡನ್ನೂ ಒಂದುಗೂಡಿಸುವ ಪ್ರಯತ್ನವೇ ವಿವೇಕಾನಂದರ ಆಧ್ಯಾತ್ಮಿಕ ನಿಲುವು ಆಗಿತ್ತು, ಅದು 'ಸ್ಪಿರಿಚುಯಲ್ ಹ್ಯೂಮನಿಸಂ' ಮಾನವಿಕ ಅಧ್ಯಾತ್ಮ ಆಗಿತ್ತು.

**ಭಾರತೀಯ ಮಾನವಿಕ ಆಧ್ಯಾತ್ಮಿಕತೆ:** ಭಾರತೀಯ ಚಿಂತನೆಯ ಮಾನವೀಯ ಮುಖವನ್ನು ಗಮನಕ್ಕೆ ತರುವ ವಿವೇಕಾನಂದರು ವೇದದ ಆದರ್ಶಗಳನ್ನು ಕುರಿತು ಮಾತನಾಡುತ್ತಾ: ''ವೇದಕಾಲೀನ ಋಷಿಗಳು ಬಹಳ ಕೆಚ್ಚೆದೆಯವರು. ತಾವು ದರ್ಶಿಸಿದ ಸಂಗತಿಗಳನ್ನು ನಿರ್ದಾಕ್ಷಿಣ್ಯವಾಗಿ ವಿವೇಚನೆಗೆ ಒಳಪಡಿಸಿದವರು. ಮೂಢನಂಬಿಕೆಗಳು ಇದ್ದದ್ದು ಕಂಡುಬಂದರೆ ಯಾವ ಹಿಂಜರಿಕೆಯೂ ಇಲ್ಲದೆ ಅವುಗಳನ್ನು ಕಿತ್ತು ಬಿಸಾಡಿದವರು. ಬಹುದೇವತಾ ನಿಲುವಿನಿಂದ ಏಕದೇವತಾ ನಿಲುವಿನವರೆಗೆ ತಮ್ಮ ಅರಿವಿನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡವರು. ಅಂತಿಮವಾಗಿ ಅವರು ಮನಗಂಡದ್ದು **ಏಕಂ ಸತ್ಯಂ ವಿಪ್ರಾಃ ಬಹುಧಾ ವದಂತಿ** ಎಂದು. ಇದರ ಒಂದು ಮುಖ್ಯ ಪರಿಣಾಮ ಧರ್ಮದ ಕಾರಣದಿಂದಾಗಿ ಪ್ರಾಣಾಂತಿಕ ಸಂಘರ್ಷಗಳು ಭಾರತದಲ್ಲಿ ನಡೆಯಲಿಲ್ಲ. ಎಲ್ಲ ಬಗೆಯ ಚಿಂತಕರೂ ಸಮಕಾಲೀನರಾಗಿರಲು ಸಾಧ್ಯವಾಯಿತು. ಯಾರ ಗ್ರಹಿಕೆ ಸರಿಯಾದದ್ದು ಎನ್ನುವುದರ ಬಗ್ಗೆ ತಾರ್ಕಿಕವಾದ ಜಿಜ್ಞಾಸೆ ದೊಡ್ಡ ಪ್ರಮಾಣದಲ್ಲೇ ನಡೆಯುತ್ತಿತ್ತು. ವೈದಿಕ ಸಿದ್ಧಾಂತಗಳು, ಆಚರಣೆಗಳು ಪೊಳ್ಳಾದದ್ದು, ಪುರೋಹಿತರ ಲಾಭಬಡುಕತನದ ಸೃಷ್ಟಿಗಳು ಎಂದು ಸಾರುತ್ತಾ ಓಡಾಡಿದ ಬುದ್ಧನಿಗಾಗಲೀ, ಜೈನ ತೀರ್ಥಂಕರರಿಗಾಗಲೀ ಯಾವ ಪ್ರಾಣಾಪಾಯದ ಬೆದರಿಕೆಯೂ ಸಮಾಜದ ಯಾವ ಮೂಲೆಯಿಂದಲೂ ಬರಲಿಲ್ಲ. ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಈಗಲೂ ಇದೆ. ಆದರೆ ಅವರ ನಿಲುವನ್ನು ತಾರ್ಕಿಕವಾಗಿ ಸಾಬೀತುಪಡಿಸಬೇಕೆಂಬ ಒತ್ತಾಯ ಮಾತ್ರ ಯಾವಾಗಲೂ ಇದೆ ಎಂದರು.

ವೇದಕಾಲೀನ ಋಷಿಗಳಿಗಿಂತ ಭಿನ್ನವಾಗಿ ಬದುಕನ್ನು ಗಮನಿಸಿದ ಉಪನಿಷತ್ಕಾಲೀನ ಋಷಿಗಳು ಉತ್ತಮ ಬದುಕು, ಬಾಹ್ಯ ನಡೆಯನ್ನು ನಿಯಮಬದ್ಧಗೊಳಿಸುವುದರಿಂದ ದೊರೆಯುತ್ತದೆ ಎನ್ನಲು ಸಾಧ್ಯವಿಲ್ಲ; ಬಾಹ್ಯ ವ್ಯವಸ್ಥೆಗಿಂತಲೂ ಆಂತರಿಕ ಬದ್ಧತೆ ಮುಖ್ಯವಾದದ್ದು; ಭಾವ ಬುದ್ಧಿ ಕ್ರಿಯಾ ಸಾಮರ್ಥ್ಯಗಳು ಆಂತರಿಕವಾಗಿ ವಿಕಾಸಗೊಳ್ಳುವುದು ಅತ್ಯಗತ್ಯ ಎಂದರು, ಬಾಹ್ಯ ವೈಭವಯುತ ಆಡಂಬರದ ಪ್ರದರ್ಶನದ ಆಚರಣೆಗಳನ್ನು ದೃಢವಾಗಿ ತಿರಸ್ಕರಿಸಿದರು. ಆಂತರಂಗಿಕ ವಿಕಾಸಕ್ಕೆ ಸಮಾಜದ ಯಾವ ವರ್ಗದ ಯಾವ ಸ್ಥಾನಮಾನದವರಿಂದ ಮಾರ್ಗದರ್ಶನ ದೊರೆತರೂ ಅಡ್ಡಿಯಿಲ್ಲ ಎಂದು ಸ್ಪಷ್ಟವಾಗಿ ಸಾರಿದರು. ಸತ್ಯಕ್ಕೂ ನಮಗೂ ನಡುವೆ ಯಾವ ಪರದೆಯ ಅಗತ್ಯವೂ ಇಲ್ಲ ಎಂದು ಅದನ್ನು ಕಿತ್ತೆಸೆದರು. ಸ್ಪಷ್ಟವಾಗಿ ಏನನ್ನೂ ಗುರುತಿಸಲಾರದ ಸಂಗತಿಯ ಆಸೆಯಿಂದ ವೈವಿಧ್ಯಮಯ ಅಗಾಧ ಸೃಷ್ಟಿ ಉಂಟಾಯಿತು ಎನ್ನುವ ಗ್ರಹಿಕೆಯಿಂದ ಉಪನಿಷತ್ಕಾರರ ಸತ್ಯಶೋಧ ಆರಂಭವಾಯಿತು. ಅದು ಆಸೆಯ ಮಿತಿಗಳನ್ನೂ ಅತಿಗಳನ್ನೂ ವಿವರವಾಗಿ ಪರಿಶೀಲಿಸಿತು. ತ್ಯಾಗ, ಸಂಯಮ, ಸೌಹಾರ್ದತೆ, ಬಹುಮುಖಿ ಸಾಮರಸ್ಯತೆ, ಪ್ರೀತಿ, ಶ್ರದ್ಧೆ, ಎಚ್ಚರಿಕೆಯ ವಿಸ್ತೃತ ಒಳನೋಟ, ವಿವೇಕಯುತ ಐಕ್ಯತೆಗಳೇ ಮೊದಲಾದ ಮೌಲ್ಯಗಳನ್ನು ಎತ್ತಿ ಹಿಡಿಯಿತು. ವೈಯಕ್ತಿಕತೆಯು ಸಾರ್ವತ್ರಿಕತೆಯಲ್ಲಿ ಏಕಗೊಳ್ಳುವುದನ್ನು ಮತ್ತು ವೈಯಕ್ತಿಕತೆಯು ಒಳಗೊಳ್ಳುವ ಎಲ್ಲ ಬಗೆಯ ಸೀಮಿತತೆಗಳನ್ನು ನಿರ್ಬಂಧಗಳನ್ನು ಸಣ್ಣತನಗಳನ್ನು ಮೀರಬೇಕಾದುದನ್ನು ಅನುಭವಾತ್ಮಕ ನೆಲೆಯಲ್ಲಿ ಸಮರ್ಥಿಸಿತು. ವ್ಯಕ್ತಿಯೇ ಜ್ಞಾನ, ಜ್ಞಾನಸಾಧನ, ಜ್ಞಾನದ ವಸ್ತು; ವ್ಯಕ್ತಿಯೇ ಎಲ್ಲದರ ಕೇಂದ್ರ, ಆಧಾರ ಎಂದು ವ್ಯಕ್ತಿಯ ಘನತೆಯನ್ನು ಎತ್ತಿಹಿಡಿಯಿತು, ಅದರೊಂದಿಗೆ ಉಳಿದ ಎಲ್ಲವುಗಳ ಘನತೆಯನ್ನೂ ಎತ್ತಿ ಹಿಡಿಯಿತು. ಕೀಳರಿಮೆಗೆ, ದಬ್ಬಾಳಿಕೆಗೆ ಅವಕಾಶವೇ ಇಲ್ಲ ಎಂದು ಸಾರಿತು. ಸರಿ ತಪ್ಪುಗಳನ್ನು ನಿರ್ಧರಿಸುವ ಮಾನದಂಡವೇ, ಗ್ರಹಿಕೆ ಮತ್ತು ಕ್ರಿಯೆಗಳು ಹೆಚ್ಚು ಹೆಚ್ಚು ವ್ಯಾಪ್ತಿಯನ್ನು ಹೊಂದುತ್ತಾ ಹೋಗುತ್ತವೆಯೇ ಇಲ್ಲವೇ ಎಂಬುದು. ಇದನ್ನು ಮನಗಾಣಲು ಎಲ್ಲರಿಗೂ ಸಾಧ್ಯವಿದೆ, ಎಲ್ಲರೂ ವ್ಯಾಪಕತೆಯ ತುತ್ತತುದಿಯನ್ನು ಮುಟ್ಟಬಲ್ಲರು; ಒಂದರ್ಥದಲ್ಲಿ ವ್ಯಕ್ತಿಯೇ ಪರಮ ವಾಸ್ತವತೆಯಾದ ಪರಬ್ರಹ್ಮ ಎಂದು ಘೋಷಿಸಿತು. ಅನುಭವಕ್ಕೆ ಬಾರದುದನ್ನೆಲ್ಲಾ ನಿರಾಕರಿಸಿತು ಎಂದು ಭಾರತೀಯ ಚಿಂತನೆಯು ಘನತೆಯ ತುತ್ತತುದಿಯನ್ನು ತಲುಪಿದುದನ್ನೂ, ಅದು ಮಾನವ ಅಸ್ತಿತ್ವದ ಪರಮ ಮೌಲ್ಯದ ಪ್ರತಿಪಾದಕವೇ ಆಗಿರುವುದನ್ನು ಸ್ವಾಮಿ ವಿವೇಕಾನಂದರು ಎಲ್ಲರ ಗಮನಕ್ಕೆ ತಂದರು.

**ವಿವೇಕಾನಂದರ ಪರಿಕಲ್ಪನೆಯ ಧರ್ಮ:** ಭಾರತೀಯರಲ್ಲಿ ಆತ್ಮಾಭಿಮಾನವನ್ನು ಮೂಡಿಸುವುದರ ಕ್ರಿಯಾಯೋಜನೆಯ ಭಾಗವಾಗಿ ನಿಜವಾದ ಧರ್ಮ ಯಾವುದು ಎಂಬುದನ್ನು ವಿವೇಕಾನಂದರು ಪುನರ್‌ರೂಪಿಸಿದರು. ವಿವೇಕಾನಂದರು ಪರಿಕಲ್ಪಿಸಿದ ಧರ್ಮದ ಮೂಲಭೂತಾಂಶ ಒಳಗೊಳ್ಳುವಿಕೆ. ಅದು ಎಲ್ಲ ಧರ್ಮಗಳ ಸರ್ವಹಿತದ ನಿಲುವುಗಳ ಒಳಗೊಳ್ಳುವಿಕೆ, ಎಲ್ಲ ಧರ್ಮೀಯರಿಗೂ ತಂತಮ್ಮ ಧರ್ಮವನ್ನು ಇತರರ ಧಾರ್ಮಿಕ ಭಾವನೆಗೆ ಧಕ್ಕೆ ಬಾರದಂತೆ ಮಾನವೀಯವಾಗಿ ಅನುಸರಿಸಿಕೊಂಡು ಹೋಗುವ ಸ್ವಾತಂತ್ರ್ಯದ ದೃಢೀಕರಿಸುವಿಕೆ; ಸರ್ವಧರ್ಮ ಸಹಿಷ್ಣುತೆ, ದೈವ ಸಾಕ್ಷಾತ್ಕಾರವನ್ನು ಜನಸೇವೆಯಲ್ಲಿ ಕಂಡುಕೊಳ್ಳುವ ಮಾನವೀಯತೆ. ವಿವೇಕಾನಂದರು, ಯಾವುದು ವ್ಯಕ್ತಿಯಲ್ಲಿ ಸುಪ್ತವಾಗಿರುವ ದೈವಿಕತೆಯನ್ನು ಪ್ರಕಾಶಪಡಿಸುವುದೋ ಅದೇ ನಿಜವಾದ ಧರ್ಮ; ಇಂತಹ ಧರ್ಮದ ಮೂರು ಕ್ರಿಯಾಶೀಲ ಮುಖಗಳು – ತಾತ್ತ್ವಿಕ, ಭಾವನಾತ್ಮಕ, ಅನುಭಾವಾತ್ಮಕ — ಎಂದರು.

ಬುದ್ಧಿ ಮತ್ತು ಹೃದಯಗಳೆರಡೂ ನಿಜವಾದ ಧರ್ಮದ ಸಾರಲಕ್ಷಣ, ಅಂಥ ಧರ್ಮವನ್ನು ನಮ್ಮದನ್ನಾಗಿಸಿಕೊಳ್ಳೋಣ ಎನ್ನುತ್ತಾರೆ ವಿವೇಕಾನಂದರು. ಚಿಕಾಗೋದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಅವರು ಘೋಷಿಸಿದುದು, ''ಪರಿಶುದ್ಧತೆ, ಪಾವಿತ್ರ್ಯತೆ, ದಯೆ, ಅನುಕಂಪೆ, ಔದಾರ್ಯಗಳು ಯಾವುದೋ ಒಂದು ರೀತಿಯ ಧಾರ್ಮಿಕ ಜೀವನರೀತಿಗೆ ಸೀಮಿತವಾದದ್ದಲ್ಲ; ಪ್ರತಿಯೊಂದು ಧಾರ್ಮಿಕ ಚಿಂತನೆಯೂ ಅತ್ಯಂತ ಶ್ರೇಷ್ಠ ವ್ಯಕ್ತಿತ್ವದ ಸ್ತ್ರೀಪುರುಷರನ್ನು ರೂಪಿಸುತ್ತಾ ಬಂದಿದೆ; ಯಾರಾದರೂ ತಮ್ಮ ಧರ್ಮವು ಮಾತ್ರ ಉಳಿಯಬೇಕು, ಉಳಿದವುಗಳು ನಾಶವಾಗಬೇಕು ಎಂದು ಬಯಸಿದರೆ ಅವರ ದುರಾಸೆಗಾಗಿ ಕನಿಕರಿಸುತ್ತೇನೆ; ಅಂತಹುದು ಎಂದಿಗೂ ಸಾಧ್ಯವಿಲ್ಲ; ಅವರು ತಮ್ಮ ಧಾರ್ಮಿಕ ಪತಾಕೆಯ ಮೇಲೆ 'ಪಾರಸ್ಪರಿಕ ಸಹಾಯ, ಹೊಡೆದಾಟವಲ್ಲ; ಪರಸ್ಪರ ಒಳಗೊಳ್ಳುವಿಕೆ, ವಿನಾಶವಲ್ಲ; ಸಾಮರಸ್ಯತೆ ಮತ್ತು ಶಾಂತಿ, ಒಡಕುಗಳಲ್ಲ' ಎಂಬ ಘೋಷವಾಕ್ಯವನ್ನು ಬರೆದುಕೊಳ್ಳಬೇಕು ಎಂದು ಹೇಳಬಯಸುತ್ತೇನೆ.'' ಈ ಘೋಷವಾಕ್ಯದ ವಿಸ್ತರಣೆಯೇ ಅವರ ಧಾರ್ಮಿಕ ಸಾಂಸ್ಕೃತಿಕ ಚಿಂತನೆಯ ಆಧ್ಯಾತ್ಮಿಕತೆಯಾಗಿತ್ತು. ಸೀಮಿತ ಅರಿವಿನ ದೈವೀ ಪ್ರಜ್ಞೆಯನ್ನು ಸರ್ವವ್ಯಾಪಕವಾಗಿ ಹಿಗ್ಗಿಸಿಕೊಳ್ಳಬೇಕು, ಎಲ್ಲದರಲ್ಲೂ ಪರಮ ವಾಸ್ತವತೆಯಾದ ದೈವೀ ಇರುವಿಕೆಯನ್ನು ಕಾಣಬೇಕು, ತನ್ನನ್ನು ಅದರೊಂದಿಗೆ ಏಕೀಕರಿಸಿಕೊಳ್ಳಬೇಕು, ಇದೇ ಧಾರ್ಮಿಕತೆಯ ಗುರಿ ಎನ್ನುತ್ತಾರೆ ವಿವೇಕಾನಂದರು.

ಧರ್ಮವನ್ನು ಸಾಮಾಜಿಕ ಸಂಸ್ಥೆಯಾಗಿ ಭಾವಿಸಿದ ವಿವೇಕಾನಂದರು ಧಾರ್ಮಿಕ ಚಟುವಟಿಕೆಗಳು ಮನೆಯಲ್ಲಿ ಮತ್ತು ದೇವಸ್ಥಾನಗಳಲ್ಲಿ ಮಠಗಳಂತಹ ಧಾರ್ಮಿಕ ಕೇಂದ್ರಗಳಲ್ಲಿ ಮಾಡುವ ದೇವರ ಪೂಜೆಗೆ ಸೀಮಿತವಾದ ವಿಧಿವಿಧಾನಗಳು, ಆಚರಣೆಗಳು, ಉತ್ಸವದಂತಹ ಸಂಭ್ರಮಾಚರಣೆಗಳು ಮಾತ್ರ ಅಲ್ಲ; ಅವು ನಮ್ಮ ಬಡ ದುರ್ಬಲ ರೋಗಪೀಡಿತ ಸಂತ್ರಸ್ತ ಜೊತೆಗಾರರನ್ನು ಕೈ ಹಿಡಿದು ಮೇಲಕ್ಕೆತ್ತುವ ರೀತಿನೀತಿಗಳೂ ಹೌದು ಎಂಬುದನ್ನು ಸ್ಪಷ್ಟಪಡಿಸಿದರು. ಅದಕ್ಕಾಗಿ ಒಂದು ಬಲವಾದ ಸಂಘಟನೆಯನ್ನು ಸಾಧಿಸಿದರು. ಹೀಗೆ ಧರ್ಮವನ್ನು ಭಾರತೀಯ ಸಮಾಜದ ನೆಲೆಯಲ್ಲಿ ಪುನರ್‌ರೂಪಿಸಿದವರಲ್ಲಿ ಸ್ವಾಮಿ ವಿವೇಕಾನಂದರೇ ಪ್ರಪ್ರಥಮರು.

(ಮುಂದಿನ ಸಂಚಿಕೆಗೆ)


# ರಾಮಕೃಷ್ಣ ತಪೋವನ

(ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಳ ಇದರ ಮಾರ್ಗದರ್ಶನದಲ್ಲಿ ನಡೆಯುವ **ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರ ಪರಿಷತ್** ಇದರ ಸದಸ್ಯತ್ವ ಹೊಂದಿದ ಸಂಸ್ಥೆ)

E-mail : ramakrishnatapovan@gmail.com, website : www.ramakrishnatapovan.org

## ರಾಮಕೃಷ್ಣ ತಪೋವನ ಬಾಲಕಾಶ್ರಮ, ಪೊಳಲಿಯಲ್ಲಿ ಉಚಿತ ವಸತಿ ಸೌಲಭ್ಯ

### ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ನಾನಾ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದ ಗ್ರಾಮೀಣ ಪ್ರತಿಭಾವಂತ ಹುಡುಗರಿಗೆ ಶಿಕ್ಷಣಕ್ಕೆ ನೆರವಾಗುವ ಅನ್ವಯ **ರಾಮಕೃಷ್ಣ ತಪೋವನ ಬಾಲಕಾಶ್ರಮವು** ಅರ್ಜಿ ಆಹ್ವಾನಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ ಸೇರಬಹುದು. ಉಚಿತ ಶಿಕ್ಷಣ, ಊಟ ಮತ್ತು ವಸತಿ ಒದಗಿಸಲಾಗುವುದು. ಜೊತೆಗೆ ಭಜನೆ, ಸಂಗೀತ, ಯಕ್ಷಗಾನ, ತೋಟಗಾರಿಕೆ, ಕಂಪ್ಯೂಟರ್, ಯೋಗ, ಶ್ರಮಸೇವೆ, ಭರತನಾಟ್ಯ, ಕರಾಟೆ ಇತ್ಯಾದಿ ತರಬೇತಿ ನೀಡಲಾಗುತ್ತದೆ. ಸುಂದರ ಹಳ್ಳಿಯ ಪರಿಸರದಲ್ಲಿ ಈ ಬಾಲಕಾಶ್ರಮವಿದ್ದು, ಆಸಕ್ತಿಯಿದ್ದ ಹುಡುಗರು 7ನೇ ತರಗತಿಯ ಪರೀಕ್ಷೆ ಮುಗಿದ ಕೂಡಲೇ ವೈಯಕ್ತಿಕ ವಿವರಗಳೊಂದಿಗೆ ದೂರವಾಣಿ ಇಲ್ಲವೆ ಅಂಚೆಯ ಮೂಲಕ ಸಂಪರ್ಕಿಸಬಹುದು. ಬಾಲಕಾಶ್ರಮದ ಪರಿಚಯ-ಮಾಹಿತಿಗಾಗಿ ವಿದ್ಯಾರ್ಥಿಗಳು ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಮಕ್ಕಳ ಮೇಲ್ವಿಚಾರಣೆಯನ್ನು ಸ್ವತಃ ಸ್ವಾಮೀಜಿಯವರೇ ವಹಿಸಿಕೊಳ್ಳುವರು.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು :**

**ರಾಮಕೃಷ್ಣ ತಪೋವನ, ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ,**
**ಕರಿಯಂಗಳ ಗ್ರಾಮ, ಪೊಳಲಿ ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ 574 219**
ದೂರವಾಣಿ ಸಂಖ್ಯೆ : 9845165108, 9481846545, 0824-2016455, 2266655